**SC 70-24** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 04.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ P H T, ವಕೀಲರಿಂದಃ**

5. ದಾವಾ ಆಸ್ತಿ ಮಹಾನಗರ ಪಾಲಿಕೆಯ ಮಾಲ್ಕಿ ಆಸ್ತಿ ಅಂದರೆ ಸರಿ. ದಾವಾ ಆಸ್ತಿ ಭೂ-ಭಾಡಿಗೇದಾರ ಪ್ರತಿವಾದಿ ಅಂದರೆ ನಾನೇ ಭೂ-ಭಾಡಿಗೆದಾರ. ಪ್ರತಿವಾದಿ ಮಹಾನಗರ ಪಾಲಿಕೆಯಿಂದ ಅನುಮತಿ ಪಡೆದು ಶೆಡ್ ಹಾಕಿಕೊಂಡಿದ್ದಾರೆ ಅಂದರೆ ಸರಿಯಲ್ಲ. ಪ್ರತಿವಾದಿ ಟೆನೆಂಟ ಅಂತಾ ಕಬ್ಜೆಯಲ್ಲಿದ್ದಾರೆ. ಭೂ-ಭಾಡಿಗೆದಾರನಾಗಿ ಪ್ರತಿವಾದಿ ದಾವಾ ಆಸ್ತಿಯಲ್ಲಿ ಕಬ್ಜೆಯಲ್ಲಿದ್ದಾರೆ ಅಂದರೆ ಸರಿಯಲ್ಲ. ಪ್ರತಿವಾದಿ ಮಹಾನಗರ ಪಾಲಿಕೆಗೆ ಕರ ತುಂಬಿಕೊಂಡು ಬಂದಿದ್ದಾರೆ ಅಂದರೆ ಸರಿಯಲ್ಲ. ದಾವಾ ಆಸ್ತಿ ಮಾಲಿಕರಲ್ಲ ಹಾಗೂ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿ ಯಾವುದೇ ಹಕ್ಕು-ಹಿತಾಸಕ್ತಿ ಇಲ್ಲದಿದ್ದರೂ ಸಹ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.